ಕರ್ನಾಟಕ ಸರಕಾರ

ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು,ಬೆಳಗಾವಿ ಜಿಲ್ಲೆ ,ಬೆಳಗಾವಿ -590001

ಕ್ರ.ಸಂ.ಚುಶಾ.113/2017-18 ದಿನಾಂಕ: 04.04.2018

ಗೆ,
ಜಿಲ್ಲೆಯ ಎಲ್ಲ ಇಲಾಖಾ ಮುಖ್ಯಸ್ಥರಿಗೆ,
ಬೆಳಗಾವಿ ಜಿಲ್ಲೆ,
ಬೆಳಗಾವಿ

ವಿಷಯ:-ಚುನಾವಣಾ ನಿಮಿತ್ತ ಯಾವುದೇ ಸಿಬ್ಬಂದಿಯವರಿಗೆ ರಜೆಯನ್ನು ಮಂಜೂರಿಸದಿರುವ ಕುರಿತು ಹಾಗೂ ಕೇಂದ್ರ ಸ್ಥಾನದಲ್ಲಿರುವ ಕುರಿತು ಸೂಚನೆ ನೀಡುವ ಬಗ್ಗೆ.

ಉಲ್ಲೇಖ:- 1) ಮಾನ್ಯ ಮುಖ್ಯ ಚುನಾವಣಾಧಿಕಾರಿಗಳು ಬೆಂಗಳೂರು ಇವರ ಪತ್ರ ಸಂ: ECI/PN/22/2018 Dated 27.03.2018.
2)ಮಾನ್ಯ ಜಿಲ್ಲಾಧಿಕಾರಿಗಳು,ಬೆಳಗಾವಿ ಇವರ ಸೂಚನೆ ದಿನಾಂಕ 04.04.2018

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ ಸೂಚಿಸುವುದೇನೆಂದರೆ ಈಗಾಗಲೇ ಚುನಾವಣಾ ಅಯೋಗವು ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಿ ಚುನಾವಣಾ ಪ್ರಕ್ರಿಯೆಗಳು ಪ್ರಾರಂಭವಾಗಿದ್ದು ಸುಮಾರು ಸಿಬ್ಬಂದಿಯವರು ಈಗಾಗಲೇ ಚುನಾವಣಾ ಕಾರ್ಯಗಳನ್ನು ಕೂಡ ನಿರ್ವಹಿಸುತ್ತಿದ್ದು ರಜೆ ದಿನಗಳಲ್ಲಿಯೂ ಕೆಲಸ ಪ್ರಗತಿಯಲ್ಲಿರುತ್ತದೆ.

ಚುನಾವಣಾ ಕರ್ತವ್ಯಕ್ಕಾಗಿ ಯಾವುದೇ ಕ್ಷಣದಲ್ಲಿ ಆದೇಶಗಳನ್ನು ಜ್ಯಾರಿ ಮಾಡುವ ಸಂದರ್ಭವಿರುವ ಕಾರಣ ತಮ್ಮ ಅಧೀನದಲ್ಲಿ ಬರುವ ಸಿಬ್ಬಂದಿಯವರಿಗೆ ಚುನಾವಣೆಯ ಸಮಯದಲ್ಲಿ ರಜೆಯ ಮೇಲೆ ತೆರಳದಿರಲು ಹಾಗೂ ಕೇಂದ್ರ ಸ್ಥಾನ ಬಿಡದಿರಲು ( ಅನಿವಾರ್ಯ ಸಂಧರ್ಭಗಳನ್ನು ಹೊರತುಪಡಿಸಿ) ಕಟ್ಟುನಿಟ್ಟಾಗಿ ನಿರ್ದೇಶನ ನೀಡಲು ಈ ಮೂಲಕ ಸೂಚಿಸಿದೆ.

5/4

ಅಪರ ಜಿಲ್ಲಾಧಿಕಾರಿಗಳು,
ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳು,
ಬೆಳಗಾವಿ